## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 891(829)
ಸದಸ್ಯರ ಹೆಸರು : ಡಾ: ಉಮಾಶ್ರೀ (ನಾಮನಿರ್ದೇಶಿತರು)
ಉತ್ತರಿಸುವ ದಿನಾಂಕ : 15-12-2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಅನುದಾನಿತ ಪಿ ಯು ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು); ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು; | • ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ, ರಾಜೀನಾಮೆ ಹಾಗೂ ಇತರೆ ಕಾರಣಗಳಿಂದ ಒಟ್ಟು 5100 (ಬೋಧಕ-3580 + ಬೋಧಕೇತರ-1520) ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ಮಾಹಿತಿಯ ವಿವರವನ್ನು ಅನುಬಂಧ-ಎ ರಲ್ಲಿ ಒದಗಿಸಲಾಗಿದೆ.<br>• ದಿನಾಂಕ: 31-12-2015ರ ಪೂರ್ವದಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಪದವಿ ಪೂರ್ವ ಕಾಲೇಜುಗಳಲ್ಲಿನ ನಿಗದಿತ ಕಾರ್ಯಭಾರವಿರುವ 1033 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಿಂದ ಅವಕಾಶ ಕಲ್ಪಿಸಲಾಗಿರುತ್ತದೆ.<br>• ಸರ್ಕಾರದ ಆದೇಶ ಸಂಖ್ಯೆ: ಇಪಿ 396 ಎಸ್ ಇ ಎಸ್ 2021 ದಿನಾಂಕ: 07-08-2024ರ ಆದೇಶದಲ್ಲಿ ದಿನಾಂಕ: 01-01-2016 ರಿಂದ 31-12-2020 ರವರೆಗೆ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಆನ್-ಲೈನ್ ಮೂಲಕ ನಡೆಸುವಂತೆ ಇತರೆ ಷರತ್ತುಗಳಿಗೆ ಒಳಪಡಿಸಿ ಆದೇಶಿಸಲಾಗಿದೆ. ಈ ಕುರಿತು ಪ್ರಸ್ತುತ ಇಲಾಖೆಯಲ್ಲಿ ಯಾವುದೇ ತಂತ್ರಾಂಶ ಲಭ್ಯವಿಲ್ಲದೇ ಇರುವುದರಿಂದ ಹೊಸದಾಗಿ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ. ಖಾಲಿ ಹುದ್ದೆಗಳ ಮಾಹಿತಿಗಳನ್ನು ಇಂದೀಕರಿಸಲು ಕಾಲಾವಕಾಶವನ್ನು ಕಾಲೇಜುಗಳಿಗೆ ನೀಡಲಾಗಿದೆ. ಹುದ್ದೆಗಳ ಭರ್ತಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕಾಗಿದ್ದು, ಸದರಿ ಅರ್ಜಿಯನ್ನು ಸಹ ತಂತ್ರಾಂಶದಲ್ಲಿ ಇಂದೀಕರಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಇಡಿ 253 ಎಸ್ ಒ ಹೆಚ್ 87 ದಿನಾಂಕ: 22-12-1987 ರಲ್ಲಿ - ಅನುದಾನಿತ ಶಾಲೆಗಳಲ್ಲಿ ದಿನಾಂಕ: 04-11-1986 ರ ಪೂರ್ವದಲ್ಲಿ ಅಥವಾ ನಂತರವಾಗಲಿ ಬೋಧಕೇತರ ಹುದ್ದೆಗಳು ಖಾಲಿಯಾದಲ್ಲಿ, ದಿನಾಂಕ: 04-11-1986ರ ನಂತರ |

| | | |
|---|---|---|
| | | ತುಂಬಲು ಅವಕಾಶವಿಲ್ಲ ಎಂದು ನಿರ್ದೇಶಿಸಲಾಗಿರುತ್ತದೆ. ಅದರಂತೆ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಭೋಧಕೇತರ ಹುದ್ದೆಗಳನ್ನು ತುಂಬಲು ಅವಕಾಶ ಇರುವುದಿಲ್ಲ. |
| ಆ) | ಪಿಯು ಉಪನ್ಯಾಸಕರನ್ನು 9 ಮತ್ತು 10 ನೇ ತರಗತಿಗೂ ಪಾಠ ಮಾಡಲು ಇಲಾಖೆಯಲ್ಲಿ ನಿಯಮ ತಿದ್ದುಪಡಿ ಮಾಡಲಾಗಿದೆಯೇ;<br>ಇಲ್ಲವಾದಲ್ಲಿ, ಯಾವಾಗ ಮಾಡಲಾಗುವುದು; | ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ 9ನೇ ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕೆಂಬುದರ ಬಗ್ಗೆ ಪರಿಶೀಲನಾ ಹಂತದಲ್ಲಿದ್ದು. ಈ ಬಗ್ಗೆ ಸಾಧಕ ಬಾಧಕಗಳ ಕುರಿತು ಕೂಲಂಕಷವಾಗಿ ಪರಿಶೀಲಿಸಿ ಕ್ರಮವಹಿಸಲಾಗುವುದು. |
| ಇ) | 2024-25ನೇ ಸಾಲಿಗೆ ಬಾಕಿ ಇರುವ 13.5 ಕೋಟಿ ರೂ. ಮೌಲ್ಯಮಾಪನ ಭತ್ಯೆ ಮತ್ತು ಸಂಭಾವನೆ ಮೊತ್ತ ಬಿಡುಗಡೆ ಮಾಡಲಾಗಿದೆಯೇ;<br>ಇಲ್ಲವಾದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು; | ಒಂದನೇ ಕಂತಿನಲ್ಲಿ ಪದವಿ ಪೂರ್ವ ವೆಚ್ಚಕ್ಕಾಗಿ ಲೆಕ್ಕ ಶೀರ್ಷಿಕೆ: 2202-02-001-0-07-015 (ಪೂರಕ ವೆಚ್ಚ) ರಡಿ ರೂ.2880.00 ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ:2202-02-001-0-07-041 (ಪ್ರಯಾಣ ವೆಚ್ಚ) ರಡಿ ರೂ. 2480.00 ಲಕ್ಷಗಳು ಬಿಡುಗಡೆಯಾಗಿದ್ದು, ಸದರಿ ಅನುದಾನವನ್ನು ಆದ್ಯತೆ ಮೇರೆಗೆ 2025ರ ಪರೀಕ್ಷೆ 1, 2 ಹಾಗೂ 3 ರ ಮೌಲ್ಯಮಾಪನ ಕಾರ್ಯ ನಿರ್ವಹಿಸಿದ ಒಟ್ಟು 39,095 ಮೌಲ್ಯಮಾಪಕರುಗಳಿಗೆ ಒಟ್ಟು ರೂ. 4874.67 ಲಕ್ಷಗಳ ಸಂಭಾವನೆ ಹಾಗೂ ಟಿಎ/ಡಿಎ ವೆಚ್ಚ ಭರಿಸಲಾಗಿರುತ್ತದೆ.<br><br>ಪ್ರಸ್ತುತ ಎರಡನೇ ಕಂತಿನಲ್ಲಿ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನದಲ್ಲಿ ಪರೀಕ್ಷೆ 1 ರಲ್ಲಿ ಸ್ಕ್ವಾಡ್ ಡ್ಯೂಟಿ ಕಾರ್ಯ ನಿರ್ವಹಣೆ ಮಾಡಿದ 3,389 ಸಿಬ್ಬಂದಿಗಳಿಗೆ ರೂ. 5,29,78,975/- ಗಳ ಕೆ2 ಬಿಲ್ಲನ್ನು ಸಿದ್ದಪಡಿಸಿ ಪಾವತಿಗಾಗಿ ಖಜಾನೆಗೆ ಸಲ್ಲಿಸಲಾಗಿದೆ ಹಾಗೂ ಪರೀಕ್ಷೆ 2 ಮತ್ತು 3 ರಲ್ಲಿ ಸ್ಕ್ವಾಡ್ ಡ್ಯೂಟಿ ಕಾರ್ಯ ನಿರ್ವಹಣೆ ಮಾಡಿದ ಸಿಬ್ಬಂದಿಗಳಿಗೆ ಸಂಭಾವನೆ ಪಾವತಿಸಲು ಕ್ರಮವಹಿಸಲಾಗುತ್ತಿದೆ.<br><br>ಪರೀಕ್ಷೆ 1, 2 & 3ರ ಮುಖ್ಯ ಪರೀಕ್ಷಕ/ಜಂಟಿ ಮುಖ್ಯ ಪರೀಕ್ಷಕರಾಗಿ ಹಾಗೂ ಕೊಠಡಿ ಸೂಪರ್‌ವೈಸರ್‌ಗಳ ಸಂಭಾವನೆ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ ಮತ್ತು ಇತರೆ ಚಟುವಟಿಕೆಗಳಿಗಾಗಿ ರೂ. 2252.87 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಲಾಗಿರುತ್ತದೆ. ಆರ್ಥಿಕ ಇಲಾಖೆಯಿಂದ ಸಹಮತಿ ದೊರೆತ ನಂತರ ಸಂಭಾವನೆಯನ್ನು ಬಿಡುಗಡೆಗೊಳಿಸುವ ಬಗ್ಗೆ ಕ್ರಮ ವಹಿಸಲಾಗುವುದು. |

ಸಂಖ್ಯೆ: ಇಪಿ 405 ಡಿಜಿಡಬ್ಲ್ಯೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ-ಎ

ANNEXURE FOR 891(829)

ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ಅಂಕಿ-ಅಂಶ

| DISTRICT | TEACHING | NON TEACHING | Grand |
|---|---|---|---|
| | Vacant | Vacant | Total |
| BANGLORE NORTH | 142 | 62 | 204 |
| BANGLORE SOUTH | 163 | 87 | 250 |
| BANGLOE RURAL | 37 | 24 | 61 |
| RAMANAGAR | 54 | 9 | 63 |
| BALLARI | 33 | 12 | 45 |
| CIKKODI | 172 | 96 | 268 |
| BELGUM | 144 | 86 | 230 |
| BAGALKOT | 102 | 28 | 130 |
| VIJAYAPURA | 293 | 145 | 438 |
| BIDAR | 245 | 98 | 343 |
| DAVANGERE | 172 | 41 | 213 |
| CHITRADURGA | 193 | 84 | 277 |
| CHIKKAMANGALURU | 63 | 19 | 82 |
| GADAG | 99 | 45 | 144 |
| HAVERI | 188 | 95 | 283 |
| DHARWAD | 177 | 59 | 236 |
| KALBURAGI | 121 | 26 | 147 |
| YADGIRI | 17 | 5 | 22 |
| HASSAN | 81 | 16 | 97 |
| CHIKKABALAPURA | 13 | 10 | 23 |
| KOLAR | 10 | 17 | 27 |
| CHAMARAJANAGAR | 12 | 5 | 17 |
| MYSORE | 122 | 27 | 149 |
| MANDYA | 45 | 9 | 54 |
| UTTAR KANNADA | 100 | 46 | 146 |
| KOPPAL | 42 | 11 | 53 |
| RAICHUR | 40 | 22 | 62 |
| MANGLORE | 121 | 90 | 211 |
| UDUPI | 82 | 52 | 134 |
| SHIVAMMOGGA | 102 | 14 | 116 |
| TUMKUR | 347 | 166 | 513 |
| KODAGU | 48 | 14 | 62 |
| **Grand Total** | **3580** | **1520** | **5100** |

ಉಪನಿರ್ದೇಶಕರು (ಮಾ&ಅ)
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)